ಶ್ರೀ ಪಿ. ಜೆ. ಆರ್. ಸಿಂಧ್ಯಾ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ವರ್ಷಗಳಿಂದ ನನಗೆ ಹೇಳುತ್ತಿದ್ದಾರೆ, ಹೊನ್ನಾಳಿಯಲ್ಲಿ ಒಂದು ಸರ್ಕಾರೀ ಸಾರ್ವತ್ರಿಕ ೩೦ ಹಾಸಿಗೆ ಇರತಕ್ಕ ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ಹೇಳುತ್ತಿದ್ದಾರೆ. ಈ ವರ್ಷ ರಾಜ್ಯ ಸರ್ಕಾರ ೧೪ ತಾಲ್ಲೂಕಿಗೆ ಆಸ್ಪತ್ರೆಯನ್ನು ಮಂಜೂರಾತಿ ಮಾಡಿದೆ. ರಾಜ್ಯದಲ್ಲಿ ಒಟ್ಟು ೬೭ ತಾಲ್ಲೂಕುಗಳಿಗೆ ಮಂಜೂರಾತಿ ಮಾಡುವ ಉದ್ದೇಶ ಎದೆ. ಅದರಲ್ಲಿ ಹೊನ್ನಾಳಿಯು ಕೂಡ ಸೇರಿದೆ. ಮೂರು ವರ್ಷದ ಅವಧಿಯಲ್ಲಿ ರಾಜ್ಯದಲ್ಲಿರತಕ್ಕ ಎಲ್ಲಾ ತಾಲ್ಲೂಕು ಕೇಂದ್ರದಲ್ಲಿ ೩೦ ಹಾಸಿಗೆ ಇರತಕ್ಕ ಆಸ್ಪತ್ರೆಯನ್ನು ಮಂಜೂರಾತಿ ಮಾಡಬೇಕೆನ್ನುವುದಿದೆ. ಅದೇ ರೀತಿಯಾಗಿ ಉಪವಿಭಾಗದಲ್ಲಿ ೫೦ ಹಾಸಿಗೆ ಇರತಕ್ಕ ಆಸ್ಪತ್ರೆ ಮಾಡಬೇಕು ಎನ್ನುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಪ್ರತಿವರ್ಷ ೧೫ ಆಸ್ಪತ್ರೆ ಮಂಜೂರು ಮಾಡತಕ್ಕ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಹೊನ್ನಾಳಿಗೆ ೧೯೮೪-೮೫ಕ್ಕೆ ಮಂಜೂರಾತಿ ಮಾಡುತ್ತೇವೆ.

## ಸರ್ಕಾರಿ ಸಚಿವಾಲಯದ ನಾಲ್ಕನೇ ದರ್ಜೆ ನೌಕರರ ಬೇಡಿಕೆಗಳು

(೮೭೮) ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾಹಿತಿ ಮಂತ್ರಿಗಳವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

೧. ಸಚಿವಾಲಯದ ನಾಲ್ಕನೇ ದರ್ಜೆ ನೌಕರರು ಸರ್ಕಾರದವರಿಗೆ ಸಲ್ಲಿಸಿರುವ ಬೇಡಿಕೆಗಳಾವುವು ? ಅವುಗಳಲ್ಲಿ ಯಾವುದಾದರೂ ಬೇಡಿಕೆಗಳನ್ನು ಈಡೇರಿಸಲಾಗಿದೆಯೇ ? ಹಾಗಿಲ್ಲದಿದ್ದಲ್ಲಿ ಹೀಗೆ ವಿಳಂಬವಾಗಲು ಕಾರಣಗಳೇನು ?

೨. ನಾಲ್ಕನೇ ದರ್ಜೆ ನೌಕರರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಕೂಡಲೇ ಕನಿಯ ಸಹಾಯಕರಾಗಿ ಬಡ್ತಿ ನೀಡುವುದು ಸೂಕ್ತವಲ್ಲವೆ ?

೩. ರಾಜ್ಯ ವಿವಿಧ ಇಲಾಖೆಗಳಲ್ಲಿ ಆಟೆಂಡರ್ ಹುದ್ದೆಗಳನ್ನು ಮುಂದುವರೆಸುತ್ತಿದ್ದು ಸಚಿವಾಲಯದಲ್ಲಿ ಮಾತ್ರ ತಡೆಹಿಡಿದಿರುವುದಕ್ಕೆ ಕಾರಣವೇನು ? ಪುನಃ ಈ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ ?

೪. ಈ ನೌಕರರು ನಿವೃತ್ತಿ ಹೊಂದಿದರೆ ಅವರ ಮಕ್ಕಳಿಗೆ ಸಚಿವಾಲಯದಲ್ಲಿ ಕೆಲಸ ಕೊಡಲಾಗುವುದೇ ?

೫. ಇತರ ವರ್ಗದ ನೌಕರರಿಗೆ ನೀಡುತ್ತಿರುವ ಬಡ್ತಿಗಳಂತೆ ನಾಲ್ಕನೇ ದರ್ಜೆ ನೌಕರರಿಗೆ ಬಡ್ತಿ ನೀಡಲು ಸೇವಾ ಅರ್ಹತೆ, ನೇಮಕಾತಿ ನಿಯಮಾವಳಿಯಲ್ಲಿ ಅವಕಾಶಗಳಿವೆಯೇ ? ಹಾಗಿದ್ದಲ್ಲಿ ಬಡ್ತಿ ನೀಡದಿರಲು ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಕರ್ನಾಟಕ ರಾಜ್ಯದ ಮಾಹಿತಿ ಮಂತ್ರಿ)

೧. ಸಚಿವಾಲಯದ ನಾಲ್ಕನೇ ದರ್ಜೆ ನೌಕರರ ಬೇಡಿಕೆಗಳು ಮತ್ತು ಅವುಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಇದಕ್ಕೆ ಲಗತ್ತಿಸಿರುವ ತಖ್ತೆಯಲ್ಲಿ ನೋಡಬಹುದು. ಗ್ರೂಪ್-ಡಿ ದರ್ಜೆಯ ನೌಕರರ ವಿವರಣಾ ಪತ್ರವು ೧೯೮೩ರ ಡಿಸೆಂಬರ್ ತಿಂಗಳಲ್ಲಿ ಬಂದಿರುತ್ತದೆ. ಈ ಬೇಡಿಕೆಗಳನ್ನು ಸಂಬಂಧಪಟ್ಟ ಇಲಾಖೆಯವರೊಡನೆ ಸಮಾಲೋಚಿಸಿ ನಿರ್ಣಯ ತೆಗೆದುಕೊಳ್ಳಬೇಕಾಗುವುದರಿಂದ ಸ್ವಲ್ಪ ವಿಳಂಬವಾಗಿದೆ.

೨. ಇಲ್ಲ. ಅವರು ಎಸ್.ಎಸ್.ಎಲ್.ಸಿ. ಪಾಸು ಮಾಡಿದ ಮೇಲೆ ೫ ವರ್ಷಗಳ ಅನುಭವ ಪಡೆದಿರಬೇಕು.

೩. ಸಚಿವಾಲಯದಲ್ಲಿ ಆಟೆಂಡರ್, ಜಮೇದಾರ್, ಮೇಸ್ತ್ರಿ ಹುದ್ದೆಗಳೆಲ್ಲ ಒಂದೇ ವೇತನ ಶ್ರೇಣಿಯಲ್ಲಿರುವುದರಿಂದ ಈ ಎಲ್ಲಾ ಹುದ್ದೆಗಳನ್ನು ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಡಿಪಿಎಆರ್ ೪೫ ಸಿಡಿಎ ೭೮ ದಿನಾಂಕ ೨೬-೭-೭೮ರ ಮೇರೆಗೆ ಜಮೇದಾರ್ ಹುದ್ದೆಗಳೆಂದು ಪುನರ್‌ನಾಮಕರಣ ಮಾಡಲಾಗಿದೆ. ಆದ್ದರಿಂದ ಆಟೆಂಡರ್ ಹುದ್ದೆಯನ್ನು ಭರ್ತಿ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

೪. ಇಲ್ಲ. ಸಂವಿಧಾನದಲ್ಲಿ ನಿವೃತ್ತರಾಗುವ ನೌಕರರ ಮಕ್ಕಳಿಗಾಗಿ ಹುದ್ದೆಯನ್ನು ಕಾದಿರಿಸಲು ಅವಕಾಶವಿಲ್ಲ.

೫. ಗ್ರೂಪ್-ಡಿ (ನಾಲ್ಕನೇ ದರ್ಜೆ) ನೌಕರರಿಗೆ ನೇಮಕಾತಿ ನಿಯಮಗಳನುಸಾರ ಈ ಕೆಳಗಿನಂತೆ ಬಡ್ತಿಯ ಅವಕಾಶಗಳಿವೆ.

೧) ದಲಾಯತ್ ಅಥವಾ ಅದಕ್ಕೆ ಸರಿಸಮಾನ ಹುದ್ದೆಯಲ್ಲಿರುವ (ವೇತನ ಶ್ರೇಣಿ ೩೯೦-೫೫೦) ನೌಕರರಿಗೆ ಜ್ಯೇಷ್ಠತೆಯ ಆಧಾರದ ಮೇಲೆ ಜಮೇದಾರ್ ಹುದ್ದೆಗೆ (ವೇತನ ಶ್ರೇಣಿ ರೂ ೪೧೦-೭೦೦) ಬಡ್ತಿ ಹೊಂದಲು ಅವಕಾಶವಿದೆ.

೬. ಸಚಿವಾಲಯದಲ್ಲಿ ಕಿರಿಯ ಸಹಾಯಕರ ಹುದ್ದೆಗಳಲ್ಲಿ ಶೇಕಡ ೨೫ರಷ್ಟು ಹುದ್ದೆಗಳನ್ನು ಸರ್ಕಾರದ ಗ್ರೂಪ್-ಡಿ ನೌಕರರಿಗೆ ಬಡ್ತಿ ನೀಡಿ ತುಂಬಿಸಲಾ ವಿಸಲಿಡಲಾಗಿದೆ.

ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರೂಪ್-ಡಿ ನೌಕರರ ಬೇಡಿಕೆಗಳ ತಃಖ್ತೆ

೧. ಬಡ್ತಿಯ ಸ್ಥಾನಗಳನ್ನು ಹೆಚ್ಚಿಸುವ ಬಗ್ಗೆ.

೨. ಅಟೆಂಡರ ಹುದ್ದೆಯನ್ನು ಸಚಿವಾಲಯದಲ್ಲಿ ಭರ್ತಿ ಮಾಡುವ ಬಗ್ಗೆ

೩. ಬಡ್ತಿಗಾಗಿ ಈ ಹಿಂದೆಯಿದ್ದ ನಿಯಮಗಳನ್ನೆ ಮುಂದುವರಿಸುವ ಬಗ್ಗೆ

೪. ಸರ್ಕಾರದ ಆಜ್ಞೆ ನಂ. ಎಫ್‌ಡಿ ೧೦೫ ಎಸ್‌ಆರ್‌ಪಿ ೬೩, ದಿನಾಂಕ ೮-೬-೧೯೬೩ನ್ನು ಮರು ಪರಿಶೀಲನೆ ಮಾಡುವ ಬಗ್ಗೆ (ಕಾಲಮಿತಿ ವೇತನ ಬಡ್ತಿಯ ನಿಯಮದ ಬಗ್ಗೆ ೧೨ ವರ್ಷ ದಿಂದ ೧೦ ವರ್ಷಕ್ಕೆ ಕಡಿಮಗೊಳಿಸಲು)

೫. ಟಿರಿಕಾಟ್ ಸಮವಸ್ತ್ರವನ್ನು ನೀಡುವ ಬಗ್ಗೆ

೬. ವಾಷಿಂಗ್ ಮತ್ತು ಆರೋಗ್ಯ ಭತ್ಯವನ್ನು ಹೆಚ್ಚಿಸುವ ಬಗ್ಗೆ

೭. ಕನ್ನಡವನ್ನು ಉತ್ತಮವಾಗಿ ಓದಲು ಬರೆಯಲು ಬರುವ ಹಾಗೂ ಗೃಹರಕ್ಷಕ ದಳದಲ್ಲಿ ಕಾರ್ಯ ನಿರ್ವಹಿಸುವ ನಾಲ್ಕನೇ ದರ್ಜೆ ನೌಕರರಿಗೆ ವೇತನ ಬಡ್ತಿಯ ರೂಪದಲ್ಲಿ ಪ್ರೋತ್ಸಾಹ ನೀಡಿರುವ ಬಗ್ಗೆ

೮. ಆಪ್ತ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ವಿಶೇಷವೇತನ ನೀಡುವ ಬಗ್ಗೆ

೯. ನಾಲ್ಕನೇ ದರ್ಜೆ ನೌಕರರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡುವ ಬಗ್ಗೆ

೧೦. ನಿವೃತ್ತರಾದ ಗ್ರೂಪ್-ಡಿ ನೌಕರರ ಮಕ್ಕಳಿಗೆ ಕೆಲಸ ನೀಡುವ ಬಗ್ಗೆ

೧೧. ಕಛೇರಿಯಲ್ಲಿ ಸಮವಸ್ತ್ರಗಳನ್ನಿಡಲು ವ್ಯವಸ್ಥೆ ಕಲ್ಪಿಸುವ ಬಗ್ಗೆ

೧೨. ಸಚಿವಾಲಯದ ಸಂಯುಕ್ತ ಸಮಾಲೋಚನಾ ಸಮಿತಿ ತೀರ್ಮಾನವನ್ನು ಜಾರಿಗೆ ತರುವ ಬಗ್ಗೆ

ಉತ್ತರಗಳು

೧. ಈ ಹಿಂದೆ ಮೂರು ವರ್ಷಗಳ ಸೇವೆಯನ್ನು ಸಲ್ಲಿಸಿ ಎಸ್‌ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದ ಗ್ರೂಪ್-ಡಿ ನೌಕರರಿಗೆ ಬಡ್ತಿಗಾಗಿ ಗ್ರೂಪ್-ಸಿ ಹುದ್ದೆಯ (ಕಿರಿಯರು ಸಹಾಯಕರ) ಶೇಕಡ ೧೦ರಷ್ಟು ಹುದ್ದೆಗಳನ್ನು ಮೀಸಲಿಡಲಾಗಿತ್ತು. ದಿನಾಂಕ ೧-೧೨-೧೯೬೩ರಿಂದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದನಂತರ ೫ ವರ್ಷಗಳ ಸೇವಾನುಭವ ಪಡೆದಿರುವ ಗ್ರೂಪ್-ಡಿ ನೌಕರರ ಬಡ್ತಿಗಾಗಿ ಗ್ರೂಪ್-ಸಿ ಹುದ್ದೆಯಲ್ಲಿ (ಕಿರಿಯ ಸಹಾಯಕರ) ಶೇಕಡ ೨೫ಕ್ಕೆ ಹೆಚ್ಚಿಸಿ ಮೀಸಲಿಡಲಾಗಿದೆ.

೨. ಸಚಿವಾಲಯದಲ್ಲಿ ಅಟೆಂಡರ್ ಹುದ್ದೆಗಳನ್ನು ೧೯೭೯ರಲ್ಲಿ ಜಮೇದಾರ್ ಹುದ್ದೆಗಳಲ್ಲಿ ವಿಲೀನ ಗೊಳಿಸುವುದರಿಂದ ಅಟೆಂಡರ್ ಹುದ್ದೆಯನ್ನು ತುಂಬುವ ಪ್ರಶ್ನೆ ಉದ್ಭವಿಸುವುದಿಲ್ಲ.

೩. ಈಗಿನ ನಿಯಮದಲ್ಲಿರುವಂತೆ ಗ್ರೂಪ್-ಡಿ ನೌಕರರು ಗ್ರೂಪ್-ಸಿ ಹುದ್ದೆಗೆ ಬಡ್ತಿ ಹೊಂದಲು ಎಸ್ ಎಸ್ ಎಲ್ ಸಿ ಪಾಸು ಮಾಡಿದ ನಂತರ ಕನಿಷ್ಠ ೫ ವರ್ಷಗಳ ಸೇವಾನುಭವ ಪಡೆದಿರಬೇಕು.

೪. ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

೫. ವಿಷಯವನ್ನು ಈ ಹಿಂದೆ ಪರಿಶೀಲಿಸಿ ವೆಚ್ಚವು ಅಧಿಕವಾಗುವುದೆಂದು ತೀರ್ಮಾನಿಸಿ ತಿರಸ್ಕರಿಸಲಾಗಿತ್ತು. ಆದರೂ ಸಹ ಪುನಃ ವಿಷಯವನ್ನು ಪರಿಶೀಲಿಸಲಾಗುತ್ತಿದೆ.

೬. ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

೭. ಕನ್ನಡ ಓದಲು ಬರೆಯಲು ಬರುವ ಗ್ರೂಪ್-ಡಿ ನೌಕರರನ್ನು ಪ್ರೋತ್ಸಾಹಿಸಲು ಯಾವುದೇ ಪರೀಕ್ಷೆಗಳನ್ನು ನಿಗದಿಪಡಿಸದಿರುವುದರಿಂದ ವೇತನ ಬಡ್ತಿಯನ್ನು ನೀಡಲು ನಿಯಮಾನುಸಾರ ಬರುವುದಿಲ್ಲ.

೮. ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

೯. ಗ್ರೂಪ್-ಡಿ ನೌಕರರ ಮಕ್ಕಳಿಗೆ ಸಹ ಪ್ರಾಥ ಶಿಕ್ಷಣದವರೆಗೆ ಉಚಿತ ವಿದ್ಯಾಭ್ಯಾಸವನ್ನು ಪಡೆಯುವ ಅನುಕೂಲವಿದೆ.

೧೦. ಇಲ್ಲ. ಸಂವಿಧಾನದಲ್ಲಿ ನಿವೃತ್ತಿ ನೌಕರರ ಮಕ್ಕಳಿಗಾಗಿ ಹುದ್ದೆಯನ್ನು ಕಾದಿರಿಸಲು ಅವಕಾಶವಿಲ್ಲ.

೧೧. ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

೧೨. ಟೆರಿಕಾಟ್ ಸಮವಸ್ತ್ರಗಳನ್ನು ನೀಡುವ ಒಂದು ಬೇಡಿಕೆಯನ್ನುಳಿದೇ ಗ್ರೂಪ್-ಡಿ ನೌಕರರಿಗೆ ಸಂಬಂಧಪಟ್ಟ ಬೇರೆಲ್ಲ ಬೇಡಿಕೆಗಳ ಬಗ್ಗೆ ತೀರ್ಮಾನ ಕೈಗೊಂಡಿದೆ. ಟೆರಿಕಾಟ್ ಸಮವಸ್ತ್ರವನ್ನು ನೀಡುವ ಬಗ್ಗೆಯೂ ಸಹ ವಿಷಯವನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ತಾವು ಮೊದಲನೆಯದಕ್ಕೆ ಉತ್ತರಕೊಟ್ಟಿದ್ದು ಸಮಾಲೋಚನೆ ಮಾಡುತ್ತಿದ್ದೇವೆ, ಇನ್ನು ಕಾಲವಿಳಂಬ ಆಗಬಹುದು ಎಂದು ಇದೆ. ಈಗಾಗಲೇ ಬೇಡಿಕೆಗಳ ಬಗ್ಗೆ ಸಂಘದವರು ೨೮ನೇ ತಾರೀಖು ಡಿಸೆಂಬರ್ ನಮ್ಮೊಡನೆ ಮಂತ್ರಿ ಅಧಿಕಾರಿಗಳೊಡನೆ ಚರ್ಚೆ ಮಾಡಿ ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಪತ್ರಿಕೆಯಲ್ಲೂ ಕೂಡ ಪ್ರಕಟಣೆಯಾಗಿದೆ. ಅದನ್ನು ಶೀಘ್ರದಲ್ಲಿ ಇತ್ಯರ್ಥ ಮಾಡುತ್ತೀರಾ, ಅವರು ಕೊಟ್ಟಿರತಕ್ಕ ತಂಪ್ತೆಯಲ್ಲಿ ಸುಮಾರು ಮುಖ್ಯವಾಗಿ ಭಾಗ ಪರಿಶೀಲನೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಅವರು ದೊಡ್ಡ ಪ್ರಮಾಣದ ಬೇಡಿಕೆ ಏನೂ ಇಲ್ಲ, ಟೆರಿಕಾಟ್ ಯೂನಿಫಾರಂ ಕೊಡಬೇಕು ಉಳಿದ ವಿಷಯಗಳು ಸಣ್ಣ ಸಣ್ಣ ವಿಷಯಗಳು ಮತ್ತು ಬಡ್ತಿ ಕೊಡುವ ವಿಷಯ, ಇವತ್ತಿನ ದಿವಸ ಐದು ವರ್ಷ ಕಡಿಮೆ ಮಾಡಬೇಕು ಎನ್ನುವ ವಿಷಯವನ್ನು ಶೀಘ್ರವಾಗಿ ಇತ್ಯರ್ಥ ಮಾಡುತ್ತೀರಾ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣನ್‌ರವರು ಬಹಳ ಮುಖ್ಯವಾದ ೩-೪ ಬೇಡಿಕೆಗಳನ್ನು ಇಟ್ಟಿದ್ದಾರೆ. ಮೊದಲನೆಯದಾಗಿ ಟೆರಿಕಾಟ್ ಬಟ್ಟೆಯನ್ನು ಯೂನಿಫಾರಂಗೆ ಕೊಡಬೇಕೆಂಬ ಮತ್ತು ಬಟ್ಟೆಗಳನ್ನು ಒಗೆಯತಕ್ಕ ಅಲೋಯೆನ್ಸ್ ಜಾಸ್ತಿ ಮಾಡಬೇಕು. ಇದರ ಖರ್ಚಿಗೆ ಅಂದಾಜು ಮಾಡದೇ ಇದನ್ನು ಒಪ್ಪಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಅದಕ್ಕೆ ವಿಳಂಬವಾಗಬಹುದು. ಎರಡನೆಯದಾಗಿ, ಕೆಲವು ವರ್ಷಗಳ ನಂತರ ಸರ್ವೀಸ್ ಆದಮೇಲೆ ಅವರಿಗೆ ಬಡ್ತಿ ಸಿಕ್ಕಬೇಕೆಂಬುದು. ಈ ವಿಚಾರದಲ್ಲಿ ೧೨ ವರ್ಷ ಸರ್ವೀಸ್ ಮಾಡಿದರೆ ಅವರಿಗೆ ಬಡ್ತಿ ಸಿಗುತ್ತದೆ. ಮತ್ತೆ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಅದನ್ನು ಪೂರ್ವಭಾವಿಯಾಗಿ ಅನೌನ್ಸ್ ಮಾಡುವುದಕ್ಕೆ ಬರುವುದಿಲ್ಲ. ನಾಲ್ಕನೇ ದರ್ಜೆ ನೌಕರರ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಿದೆ. ಮೂರನೆಯದಾಗಿ ಜೂನಿಯರ್ ಅಸಿಸ್ಟೆಂಟ್ ಹುದ್ದೆಗೆ ಬಡ್ತಿ ಕೊಡಬೇಕೆಂದು ಹೇಳಿದ್ದಾರೆ. ಶೇಕಡ ೧೮ರಷ್ಟು ಬಡ್ತಿ ಕೊಡತಕ್ಕಂಥಾ ವ್ಯವಸ್ಥೆ ಇದೆ. ಕಳೆದ ಡಿಸೆಂಬರ್‌ನಲ್ಲಿ ಅಧಿಕಾರಕ್ಕೆ ಬಂದಮೇಲೆ ಅದನ್ನು ಶೇಕಡ ೧೨ ರಿಂದ ೨೫ಕ್ಕೆ ಹೆಚ್ಚು ಮಾಡಿದ್ದೇವೆ. ಮೊದಲಿಗಿಂತ ಎರಡೂವರೆ ಪಟ್ಟು ಜಾಸ್ತಿ ಸಿಗುವಂಥಾ ಅವಕಾಶವಾಗಿದೆ ಅದಕ್ಕೆ ಇರತಕ್ಕಂಥಾ ಅರ್ಹತೆ ಎಸ್.ಎಸ್.ಎಲ್.ಸಿ ಪಾಸಾಗಿರಬೇಕು ಇಲ್ಲವೇ ಐದು ವರ್ಷ ಅನುಭವ ಇರಬೇಕು ಇದರ ಜೊತೆಗೆ ಮೂರು ವರ್ಷ ಮೊದಲೇ ಇದ್ದು ಇದರ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ. ಸಾಧ್ಯವಾದರೆ ಇದನ್ನು ಕೂಡ ತೀರ್ಮಾನ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಿವೃತ್ತಿ ಹೊಂದಿದ ನೌಕರರ ಮಕ್ಕಳಿಗೆ ನೌಕರಿಗಳನ್ನು ಕಾದಿರಿಸುವುದಕ್ಕೆ ಅವಕಾಶ ಇಲ್ಲವೆಂದು ಹೇಳಿದ್ದೀರಿ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಕೃಷ್ಣನ್ ಅವರು ಕಾರ್ಮಿಕ ಕ್ಷೇತ್ರದ ಮುಖಂಡರು ಅವರು ಎಲ್ಲಾ ಕಾರ್ಖಾನೆಗಳಲ್ಲಿ ಸರಿತಿ ಮಾಡಿಸುವುದರಲ್ಲಿ ಬಹಳ ಯೋಗ್ಯವಾದುದು ಆದರೆ ಇಲ್ಲಿ ತೊಂದರೆ ಏನೆಂದರೆ ನೌಕರನನ್ನು ಅನಾವಶ್ಯಕವಾಗಿ ತೆಗೆದುಕೊಳ್ಳುವುದು ಎಷ್ಟು ಸಾಧ್ಯ ಎಂಬುದನ್ನು ನೋಡಬೇಕು. ಕ್ಲಾಸ್ ಡಿ ದರ್ಜದ ನೌಕರನನ್ನು ಬಡ್ತಿ ಕ್ಲಾಸ್ ಬಿ ದರ್ಜದ ನೌಕರನನ್ನಾಗಿ ಏಕೆ ಕೆಲಸ ಮಾಡಬೇಕು ? ಕ್ಲಾಸ್ ಬಿ ಸಿ ಹುದ್ದೆಗೆ ಆಯ್ಕೆಯಾದರು. ಈ ತರಹ ನೌಕರಿ ಕೊಡುತ್ತೇವೆಂದು ಹೇಳಿದರೆ ಅವರು ಬೇರೆ ಜಾತಿ ಧರ್ಮವನ್ನು ಪಾಡುವುದಿಲ್ಲ. ನಾವೆಲ್ಲರೂ ನೌಕರಿಯಲ್ಲಿ ಯಾರಾದರೂ ಮೃತಪಟ್ಟರೆ ಅವರಿಗೆ ಸರ್ಕಾರಿ ನೌಕರಿ ಕೊಡಬೇಕೆಂದು ಇದೆ. ಅದನ್ನು ತಿದ್ದುಪಡಿ ಮಾಡಿ ಸರ್ಕಾರೀ ನೌಕರಿಯಲ್ಲಿ ದಶಕ್ಕಿಂತಲೂ ತುಂಬಿತಾಯಿಗಳು ಸತ್ತಾಗ ಮಕ್ಕಳು ಚಿಕ್ಕವರಿದ್ದರೆ ೧೦ ವರ್ಷ ೧೨ ವರ್ಷ ಆಗಿದ್ದರೆ, ಎಜುಕೇಷನ್ ಫೈನಲ್ ಆಗದಿದ್ದರೆ ಸಂಬಂಧಪಟ್ಟ ಮಕ್ಕಳು ಪ್ರಾಪ್ತ ವಯಸ್ಕರು ಆಗುವವರೆಗೆ, ಪ್ರಾಪ್ತ ವಯಸ್ಕರು ಆದಮೇಲೆ ಅವಕಾಶ ಕೊಡಬೇಕೆಂದು ತಿದ್ದುಪಡಿ ಮಾಡಿದ್ದೇವೆ. ಅದರಿಂದ ಅನೇಕ ಜನರಿಗೆ ಲಾಭವಾಗಿಂತ್ತದೆ.

## ಮಾರಾಟ ಕರ ಸರಳೀಕರಣಗೊಳಿಸುವ ವಿಚಾರ ಕುರಿತು

೮೬೬. ಶ್ರೀ ಬಿ. ಬಿ. ಬಿಸ್ಟಿ (ಗುಳೇದ ಗುಡ್ಡ) —ಮಾನ್ಯ ಮುಖ್ಯ ಮಂತ್ರಿಗಳು ಉತ್ತರಿಸುವರೆ.

ಅ) ಈಗಿರುವ ಜಟಿಲತೆಯು ಮಾರಾಟಕರ ಕಾಯ್ದೆಯಾದ ವ್ಯಾಪಾರಿ ವರ್ಗಕ್ಕೆ ತೊಂದರೆಯಾಗಿರುವ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಆ ಕಾಯ್ದೆಯನ್ನು ಸ್ಥಳೀಕರಣ ಗೊಳಿಸಲು ಸರಕಾರದವರು ಆಲೋಚಿಸಿರುವರೇ ?

ಇ) ಯಾಗಿದ್ದಲ್ಲಿ ಅದರ ವಿವರಗಳೇನು ?

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ ( ವಾಣಿಜ್ಯ ಮಂತ್ರಿಗಳವರು ).—

ಅ) ವ್ಯಾಪಾರಿ ವರ್ಗದವರು ಈಗಿರುವ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ ಮತ್ತು ನಿಯಮಗಳ ನಿಬಂಧನೆಗಳ ಸರಳೀಕರಿಸುವ ಬಗ್ಗೆ ಹಲವು ಹಾಗೂ ಸಲಹೆಗಳನ್ನು ಮಾಡಿರುತ್ತಾರೆ.

ಆ), ಇ), ಈ), ಸರ್ಕಾರವು ಸ್ವಇಚ್ಛೆಯ ಮೇರೆಗೆ ಅಥವಾ ವಿವಿಧ ವಾಣಿಜ್ಯ ಸಂಘಗಳು, ಕೈಗಾರಿಕೆ ಮತ್ತು ವಾಣಿಜ್ಯ ಮಂಡಲಿಗಳ ಅಥವಾ ವೈಯಕ್ತಿಕ ಮನವಿಗಳ ಮೇರೆಗೆ ಮಾರಾಟಕರ ತೆರಿಗೆ ಅಧಿನಿಯಮ ಮತ್ತು ನಿಯಮಗಳ ನಿಬಂಧನೆಗಳನ್ನು ಸರಳ ಗೊಳಿಸುವ ಹಾಗೂ ಕ್ಲಿಷ್ಟತೆಗಳನ್ನು ನಿವಾರಿಸುವ ದಿಸೆಯಲ್ಲಿ ನಿರಂತರ ಪ್ರಯತ್ನ ನಡೆಸಿದೆ. ಈ ಬಗ್ಗೆ ಸರ್ಕಾರದವರು ತೆರಿಗೆ ವಿಮರ್ಶಣಾ ಸಮಿತಿಯನ್ನು ಸಹ ತೆರಿಗೆ ಮಾರಾಟ ತೆರಿಗೆ ಅಧಿನಿಯಮದ ಬಗ್ಗೆ ಸುಧಾರಣೆಗಳನ್ನು ಸೂಚಿಸಲು ಕೋರಲಾಗಿತ್ತು. ಸದ್ಯ ಈ ಸಮಿತಿಯು ಸಲ್ಲಿಸಿದ ವರದಿಯ ಮೇರೆಗೆ ಕ್ರಮಗಳನ್ನು ಸಹ ತೆಗೆದುಕೊಳ್ಳಲಾಗಿದೆ. ಇದರ ಜೊತೆ ತೆಗೆದುಕೊಂಡ ಕ್ರಮಗಳು ಹಾಗೂ ಮುಂದೆ ತೆಗೆದುಕೊಳ್ಳಬೇಕಿರುವ ವಿಷಯಗಳಿಗಾಗಿ ಈ ರೀತಿ ಇವೆ.

ಅ) ನೋಂದಣಿ ಮಿತಿಯನ್ನು ೪೦,೦೦೦ ರೂಪಾಯಿಗಳಿಗೆ ಹೆಚ್ಚಿಸಿದೆ. ( ಈ ಮಿತಿಯನ್ನು ೫೦,೦೦೦ ರೂಪಾಯಿಗಳಿಗೆ ಹೆಚ್ಚಿಸಲು ಉದ್ದೇಶಿಸಿದೆ ).

ಆ) ತೆರಿಗೆ ಪಾವತಿಸುವ ಪರಿಮಿತಿಯನ್ನು ೪೦,೦೦೦ ರೂಪಾಯಿಗಳಿಗೆ ಹೆಚ್ಚಿಸಿರುವುದು. (ಇದನ್ನು ಒಂದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲು ಉದ್ದೇಶಿಸಿದೆ ).

ಇ) ಕ್ಲಿಷ್ಟಕರ ನಿರ್ವಾರಣ ಯೋಜನೆಯಲ್ಲಿ ವಾರ್ಷಿಕ ವಹಿವಾಟು ೧½ ಲಕ್ಷಕ್ಕೂ ಮೀರದ ವ್ಯಾಪಾರಸ್ಥರಿಗೆ ಅನ್ವಯಿಸಲಾಗಿದೆ.

ಈ) ತೆರಿಗೆ ದರಗಳ ಸಂಖ್ಯೆಯನ್ನು ಇಳಿಮೆ ಮಾಡಲಾಗಿದೆ.

ಉ) ವಿಕ್ರಯಾಂಶ ತೆರಿಗೆಗೆ ಒಳಪಡುವ ಸರಕುಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ( ಇನ್ನೂ ೨೧ ಸರಕುಗಳನ್ನು ವಿಕ್ರಯಾಂಶ ತೆರಿಗೆಗೆ ಏಗರ್ಾಯಿಸಲು ಉದ್ದೇಶಿಸಿದೆ ).